ದಿನಾಂಕ 25-06-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ದಾವಾ ಆಸ್ತಿಯ ಪಶ್ಚಿಮಕ್ಕೆ ಮತ್ತು ಪ್ರತಿವಾದಿಯ ಆಸ್ತಿಯ ಪೂರ್ವಕ್ಕೆ ಒಂದು ಗೋಡೆ ಇತ್ತು ಎಂದರೆ ಸಾಕ್ಷಿಯ ಅದನ್ನು ಪ್ರತಿವಾದಿ ಕೆಡವಿರುವುದಾಗಿ ನುಡಿಯುತ್ತಾರೆ. ದಾವಾ ಆಸ್ತಿ ಮತ್ತು ಪ್ರತಿವಾದಿಯ ಆಸ್ತಿ ಮೂಲತಃ ನಮ್ಮ ಮನೆತನದ ಆಸ್ತಿಯಾಗಿತ್ತು ಎಂದರೆ ಸರಿ. ಪ್ರತಿವಾದಿಯ ಅಜ್ಜ ಪ್ರತಿವಾದಿಯ ಆಸ್ತಿಯನ್ನು ನನ್ನ ಚಿಕ್ಕಪ್ಪನಿಂದ ಖರೀದಿಸಿರುತ್ತಾರೆ ಎಂದರೆ ಸರಿ. ಅಂದಿನಿಂದ ಸದರಿ ಆಸ್ತಿಯಲ್ಲಿ ಪ್ರತಿವಾದಿ ಕಬ್ಜಾದಲ್ಲಿರುತ್ತಾನೆ ಎಂದರೆ ಸರಿ. ದಾವಾ ಆಸ್ತಿಯ ಪೂರ್ವಕ್ಕೆ ಇರುವ ಗೋಡೆಯೂ ಸಹ ಬಿದ್ದಿರುತ್ತದೆ ಎಂದರೆ ಸರಿ. ಪ್ರತಿವಾದಿಯು ದಾವಾ ಆಸ್ತಿಯ ಪೂರ್ವಕ್ಕೆ ಗೋಡೆ ಕಟ್ಟಬಾರದು ಎಂದು 1 ನೇ ಅರ್ಜಿಯನ್ನು ದಾಖಲಿಸಿದ್ದರು ಎಂದರೆ ಸರಿ.

2. ವಾದ ಪತ್ರದ ಜೊತೆ ಹಾಜರುಪಡಿಸಿದ ಹಾತ್ ನಕಾಶೆ ಸುಳ್ಳಿನಿಂದ ಕೂಡಿದ್ದು ನಮ್ಮ ಅನುಕೂಲಕ್ಕೆ ತಕ್ಕಂತೆ ತಯಾರಿಸಿರುತ್ತೇವೆ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ ತೋರಿಸಿರುವ ವ್ಯಾಜ್ಯ ಕಾರಣವನ್ನು ನಾನೇ ಹೇಳಿ ಬರೆಸಿರುತ್ತೇನೆ. ಪ್ರತಿವಾದಿಯು ಕಟ್ಟುತ್ತಿರುವ ಗೋಡೆಯ ಜಾಗಕ್ಕೂ ಮತ್ತು ನಮಗೂ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಈ ದಾವೆಯನ್ನು ಹೂಡುವ ಸಮಯದಲ್ಲಿ ಪ್ರತಿವಾದಿಯು ಅತಿಕ್ರಮಣ ಮಾಡಿ ಗೋಡೆ ಕಟ್ಟುತ್ತಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರಲಿಲ್ಲ ಎಂದರೆ ಸರಿಯಲ್ಲ. ಕೇವಲ ನಮ್ಮ ಕಾಲ್ಪನಿಕ ಕಾರಣದಿಂದ ಈ ದಾವೆಯನ್ನು ಹೂಡಿದ್ದು ಸತ್ಯದಿಂದ ಕೂಡಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಬಳಿ ಯಾವುದೇ ದಾಖಲೆಗಳು ಇಲ್ಲದ ಕಾರಣ ನ್ಯಾಯಾಲಯದಿಂದ ಕಮಿಶನರ್ ನೇಮಕಗೊಳಿಸಿಕೊಂಡಿದ್ದೆವು ಎಂದರೆ ಸಾಕ್ಷಿಯು ಯಾವುದೇ ಉತ್ತರ ನೀಡಿರುವುದಿಲ್ಲ. ಪ್ರತಿವಾದಿಯು ಯಾವುದೇ ಅತಿಕ್ರಮಣ ಮಾಡಿರುವುದಿಲ್ಲ ಎಂದು ನನಗೆ ಗೊತ್ತಿದೆ ಎಂದರೆ ಸರಿಯಲ್ಲ.

3. ದಾವಾ ಹಾತ್ ನಕಾಶೆಯಲ್ಲಿ ತೋರಿಸಿರುವ ಐ ಜೆ ಆಸ್ತಿಯು ನಮ್ಮ ಮಾಲೀಕತ್ವಕ್ಕೆ ಸಂಬಂಧಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪೂರ್ವ ದಿಕ್ಕಿಗೆ ಇದ್ದ ಗೋಡೆಯು ನಮ್ಮ ಮತ್ತು ಪ್ರತಿವಾದಿಯ ಆಸ್ತಿಯ ಕಾಮನ್ ವಾಲ್ ಆಗಿತ್ತು ಎಂದರೆ ಸರಿ. ಸದರಿ ಗೋಡೆ 16 ಇಂಚು ಅಗಲ ಇತ್ತು ಎಂದರೆ ಸಾಕ್ಷಿಯು ಯಾವುದೇ ಉತ್ತರ ನೀಡಿರುವುದಿಲ್ಲ. ಪ್ರತಿವಾದಿಯು

ಈಗ ಕೇವಲ 6 ಇಂಚು ಅಗಲದ ಗೋಡೆ ಕಟ್ಟುತ್ತಿದ್ದಾನೆ ಎಂದರೆ ಸರಿಯಲ್ಲ. ನಿಪಿ 14 ರ

ಫೋಟೋದಲ್ಲಿ ಕಾಣಿಸುವ ನಿರ್ಮಾಣ ಹಂತದಲ್ಲಿರುವ ಮನೆಯ ಬಲಭಾಗದ ಆಸ್ತಿ ದಾವಾ ಆಸ್ತಿಯಾಗಿರುತ್ತದೆ ಎಂದರೆ ಸರಿ. ಸದರಿ ಫೋಟೋದಲ್ಲಿ ಕಾಣಿಸುತ್ತಿರುವ ಬಿದ್ದಿರುವ ಗೋಡೆಯು ದಾವಾ ಆಸ್ತಿ ಮತ್ತು ಪ್ರತಿವಾದಿ ಆಸ್ತಿಯ ನಡುವಿನ ಹಳೆಯ ಗೋಡೆಯಾಗಿರುತ್ತದೆ ಎಂದರೆ ಸರಿ. ಸದರಿ ಬಿದ್ದಿರುವ ಗೋಡೆಯನ್ನು ದಾಟಿ ಯಾವುದೇ ಅತಿಕ್ರಮಣ ಮಾಡಿ ಗೋಡೆ ಕಟ್ಟುತ್ತಿಲ್ಲ ಎಂದರೆ ಸರಿ.

**ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.